**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1**

ಸಿ4(7) ಪ್ರಾ..ಶಾ.ಶಿ ವರ್ಗ/55/2011-12. ದಿನಾಂಕ: 21.03.2011

## ಸುತ್ತೋಲೆ

ವಿಷಯ: ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ರಡಿಯಲ್ಲಿ ರೂಪಿಸಲಾಗಿರುವ ನಿಯಮಗಳಂತೆ 2011ರ ಏಪ್ರಿಲ್/ಮೇ ಮಾಹೆಯ ವರ್ಗಾವಣೆ ಪೂರ್ವ ಸಿದ್ಧತೆಯ ಬಗ್ಗೆ

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 1 ಶಾಸನ 2007, ದಿನಾಂಕ: 01.09.2007

2 ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007, ದಿನಾಂಕ: 15.10.2007

3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007, ದಿನಾಂಕ: 14.11.2007

4. ದಿನಾಂಕ: 09.03.2011ರಂದು ನಡೆದ ಸಭೆಯ ನಡವಳಿ.

******

ಉಲ್ಲೇಖ-1 ರಂತೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ಜಾರಿಗೆ ಬಂದಿರುತ್ತದೆ. ಈ ಅಧಿನಿಯಮಕ್ಕೆ ಉಲ್ಲೇಖ-2 ರಂತೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007 ರೂಪಿಸಿ ಪ್ರಕಟಿಸಲಾಗಿದೆ. ಉಲ್ಲೇಖ-3 ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ರ ಕಲಂ-2 ರಲ್ಲಿನ ಉಪಕಂಡಗಳಾದ (ಇ) ಮತ್ತು (ಕೆ) ರಂತೆ ಶಿಕ್ಷಕರುಗಳ/ಉಪನ್ಯಾಸಕರ ನೇರ ನೇಮಕಾತಿ/ವಿಲೀನಗೊಳಿಸುವ ಮೂಲಕ ಅಥವಾ ಬಡ್ತಿ ಮೂಲಕ ಹಾಗು ವರ್ಗಾವಣೆಗಾಗಿ ಎಲ್ಲಾ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳನ್ನು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಎ,ಬಿ ಮತ್ತು ಸಿ ವಲಯಗಳಾಗಿ ವರ್ಗೀಕರಿಸಲು ಪ್ರದೇಶ ಹಾಗೂ ವ್ಯಾಪ್ತಿಯನ್ನು ಅಧಿಸೂಚಿಸಿದೆ.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ರಡಿಯಲ್ಲಿ ರೂಪಿಸಲಾಗಿರುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007, ರಂತೆ 2011ರ ಎಪ್ರಿಲ್/ಮೇ ಮಾಹೆಯಲ್ಲಿ ವರ್ಗಾವಣೆ ಮಾಡುವ ಸಂಬಂಧ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗಿರುತ್ತದೆ.

ಈ ಸಂಬಂಧ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಈ ಕೆಳಕಾಣಿಸಿದ ವೃಂದಗಳ ವೃಂದಬಲ ಮತ್ತು ಖಾಲಿ ಹುದ್ದೆಗಳನ್ನು ಇಲಾಖೆಯ ವೆಬ್‌ಸೈಟ್ **www.schooleducation.kar.nic.in** ನಲ್ಲಿ ಪ್ರಕಟಿಸಲಾಗಿರುವ ತಂತ್ರಾಂಶದಲ್ಲಿ ದಿನಾಂಕ: 28.03.2011 ರೊಳಗೆ update ಮಾಡಿಕೊಳ್ಳಲು ತಿಳಿಸಿದೆ.

| **ಕ್ರಮ ಸಂಖ್ಯೆ** | **ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ಹೆಸರು** | **ಪ್ರೌಢಶಾಲಾ ಶಿಕ್ಷಕರ ವೃಂದದ ಹೆಸರು** |
|---|---|---|
| 1 | ಪದವೀಧರೇತರ ಮುಖ್ಯಶಿಕ್ಷಕರು | ಸಹಶಿಕ್ಷಕರು ಗ್ರೇಡ್-2 |
| 2 | ಶಿಕ್ಷಣ ಸಂಯೋಜಕರು [ಪ್ರಾಥಮಿಕ] | ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 |
| 3 | ಮುಖ್ಯಶಿಕ್ಷಕರು | ಚಿತ್ರಕಲಾ ಶಿಕ್ಷಕರು |

| | | |
|---|---|---|
| 4 | ಸಿ.ಆರ್.ಪಿ ಮುಖ್ಯ ಶಿಕ್ಷಕರು / ಸಿ.ಆರ್.ಪಿ. ಸಹಶಿಕ್ಷಕರು | ಸಂಗೀತ ಶಿಕ್ಷಕರು |
| 5 | ಸಹಶಿಕ್ಷಕರು, ಕನ್ನಡ | ನೃತ್ಯ ಶಿಕ್ಷಕರು |
| 6 | ಸಹಶಿಕ್ಷಕರು, ಇಂಗ್ಲೀಷ್ | ನಾಟಕ ಶಿಕ್ಷಕರು |
| 7 | ಸಹಶಿಕ್ಷಕರು, ಹಿಂದಿ | ವೃತ್ತಿ ಶಿಕ್ಷಣ ಶಿಕ್ಷಕರು |
| 8 | ಸಹಶಿಕ್ಷಕರು, ವಿಜ್ಞಾನ | ಬಿಆರ್‌ಪಿ/ಸಿಆರ್‌ಪಿ |
| 9 | ಸಹಶಿಕ್ಷಕರು, ತಮಿಳು / ತೆಲುಗು | ಎಸ್.ಎಸ್.ಎಶಿಕ್ಷಕರು |
| 10 | ದೈಹಿಕ ಶಿಕ್ಷಣ ಶಿಕ್ಷಕರು | ಶಿಕ್ಷಣ ಸಂಯೋಜಕರು |
| 11 | ಸಂಗೀತ ಶಿಕ್ಷಕರು | – |
| 12 | ಚಿತ್ರಕಲಾ ಶಿಕ್ಷಕರು | – |

2011 ನೇ ಸಾಲಿನ **ವರ್ಗಾವಣಾ ಪ್ರಕ್ರಿಯೆ ಸುಗಮವಾಗಿ ನಡೆಸುವ ಸಲುವಾಗಿ ಸರ್ಕಾರಿ ಪ್ರೌಢಶಾಲೆಗಳಲ್ಲಿರುವ ವಿವಿಧ ವೃಂದದ** ಶಿಕ್ಷಕರ ವರ್ಗಾವಣೆ ಬಗ್ಗೆ ಮಾಹಿತಿಯನ್ನು ಕ್ರೋಡೀಕರಿಸಿ ಅಗತ್ಯ ಕ್ರಮ ಕೈಗೊಳ್ಳಲು ಒಬ್ಬ ಶಿಕ್ಷಣಾಧಿಕಾರಿಯನ್ನು **"ವರ್ಗಾವಣಾ ನೋಡಲ್ ಅಧಿಕಾರಿ"**ಯನ್ನಾಗಿ ನೇಮಿಸಲು ತಿಳಿಸಿದೆ. ಅದೇ ರೀತಿ **ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿರುವ ವಿವಿಧ ವೃಂದದ** ಶಿಕ್ಷಕರ ವರ್ಗಾವಣೆ ಬಗ್ಗೆ ಮಾಹಿತಿಯನ್ನು ಕ್ರೋಡೀಕರಿಸಿ ಅಗತ್ಯ ಕ್ರಮ ಕೈಗೊಳ್ಳಲು ಒಬ್ಬ ಶಿಕ್ಷಣಾಧಿಕಾರಿಯನ್ನು **"ವರ್ಗಾವಣಾ ನೋಡಲ್ ಅಧಿಕಾರಿ"**ಯನ್ನಾಗಿ ನೇಮಿಸಲು ತಿಳಿಸಿದೆ.

(ಕೆ.ಪಿ.ಹನುಮಂತರಾಯಪ್ಪ)
ನಿರ್ದೇಶಕರು (ಪ್ರೌಢಶಿಕ್ಷಣ)

ಗೆ:

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಮುಂದಿನ ಕ್ರಮಕ್ಕಾಗಿ.
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಇವರ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:

1. ಸರ್ಕಾರದ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು–01.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಗುಲ್ಬರ್ಗಾ
3. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ
4. ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ವಿಭಾಗೀಯ ಸಹ ನಿರ್ದೇಶಕರು, ಬೆಂಗಳೂರು, ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾ ವಿಭಾಗ
6. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ಘಟಕ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
7. ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ.
8. ಶ್ರೀ.ಶಿವಕುಮಾರ್ ಪ್ರೋಗ್ರಾಮರ್, ಇ–ಆಡಳಿತ ಘಟಕ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
9. ಕಛೇರಿ ಪ್ರತಿ.